ಸಿ.ಸಿ..ನಂ.68/2023

ಪಿ.ಡಬ್ಲ್ಯೂ–1

ದಿನಾಂಕ.19–12–2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೆ ಕರಿಸಲಾಯಿತು.

**ಮುಂದುರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಡಿ.ಎನ್ ಎನ್ ವಕೀಲರಿಂದಃ**

1. 2 ನೆ ಅರೋಪಿ ಮನೆಗೆ ಹೋಗಿದ್ದೇವೆ ಎಂದು ಹೇಳಿದಂತೆ ಆಗ ಸಮಯ ಎಷ್ಟು ಆಗಿತ್ತು ಎಂದು ಈಗ ನನಗೆ ನೆನಪಿಲ್ಲ . 1 ನೇ ಆರೋಪಿಯ ಮನೆಗೆ ಹೋಗಿದ್ದೇನೆ ಎಂದು ನೀವು ಹೇಳಿದಂತೆ ಆಗ ಸಮಯ ಎಷ್ಟು ಆಗಿತ್ತು ಎಂದರೆ ಅಂದಾಜು 10–25 ರಿಂದ 10–30 ಆಗಿತ್ತು . ಪಂಚನಾಮೆಯಲ್ಲಿ ಅವರ ಮನೆಗೆ 10–25 ರಿಂದ 10–30 ರ ಸಮಯದಲ್ಲಿ ಹೋಗಿರುತ್ತೇವೆ ಎಂದು ನಮೂದಿಸಿರುತ್ತಿರಾ ಎಂದರೆ ಇಲ್ಲ. . ಜಪ್ತು ಪಂಚನಾಮೆ ಮತ್ತು ಪುರವಣಿ ಪಂಚನಾಮೆ ಯಲ್ಲಿ ಬಾತ್ಮಿ ಬಂದದ್ದು ಎಷ್ಟು ಗಂಟೆಗೆ ಘಟನಾ ಸ್ಥಳಕ್ಕೆ ಹೋಗಿದ್ದೆವು ಎನ್ನಲಾದ ಸಮಯ ಕರ್ತವ್ಯ ಇದ್ದ ಸಮಯ ಇವುಗಳನ್ನು ಎಲ್ಲಿಯೂ ಬರೆದದ್ದು ಇಲ್ಲ . ಎಂದರೆ ಸರಿ . ಅದರ ಅವಶ್ಯಕತೆ ಕಂಡುಬಂದಿಲ್ಲ ಹಾಗಾಗಿ ಬರೆದಿಲ್ಲ . ಆ ಜಿಂಕೆ ಚರ್ಮ ಕ್ಕೆ ಎಷ್ಟು ಗುಂಡು ಗಳು ತಾಗಿದ್ದವು ಎಷ್ಟು ತೂತುಗಳು ಆಗಿದ್ದವು ಅವುಗಳ ಅಗಲ ಎಷ್ಟು ಎಂದು ಜಪ್ತು ಪಂಚನಾಮೆಯಲ್ಲಿ ಮತ್ತು ಪುರವಣಿ ಪಂಚನಾಮೆ ಯಲ್ಲಿ ನಮೂದು ಮಾಡಿದ್ದೀರಾ ಎಂದರೆ ಇಲ್ಲ . ನೀವು ಸದ್ರಿ ಪಂಚನಾಮೆಗಳನ್ನು ಎಲ್ಲೆಲ್ಲಿ ಬರೆದಿರುತ್ತಿರಿ ಎಂದು ನಮೂದು ಇಲ್ಲ ಎಂದರೆ ಪಂಚನಾಮೆಯಲ್ಲಿ ಇರುತ್ತದೆ . ಸಾಕ್ಷಿ ಸದ್ರಿ ಪಂಚನಾಮೆ ನೋಡಿ ಬೇರೆ ಬೇರೆ ಸ್ಥಳಗಳಲ್ಲಿ ಎಲ್ಲೆಲ್ಲಿ ಎಂದು ನಮೂದು ಮಾಡಿಲ್ಲ ಆದರೆ ಪ್ರಾರಂಭದಲ್ಲಿ 1 ನೆ ಆರೋಪಿಯ ಮನೆಯಿಂದ ಪಂಚನಾಮೆ ಬರೆಯಲು ಪ್ರಾರಂಭಿಸಿರುತ್ತೇವೆ ಅದನ್ನು ಬರೆದಿರುತ್ತೇವೆ. ನೀವು ಸದ್ರಿ ಪಂಚನಾಮೆಯನ್ನು ಪ್ರಕರಣ ಸೃಷ್ಟಿಸುವ ಅನೂಕೂಲವಾಗಲಿ ಎಂದು ಠಾಣೆಯಲ್ಲಿ ಬರೆದಿರುವುದರಿಂದ ಬೇರೆ ಬೇರೆ ಸ್ಥಳಗಳಲ್ಲಿ ಎಲ್ಲೆಲ್ಲಿ ಪಂಚನಾಮೆ ಬರೆಯಲಾಯಿತು ಎಂದು ಸದ್ರಿ ಪಂಚನಾವೆಯಲ್ಲಿ ಕಾಣಿಸಿಲ್ಲ ಎಂದರೆ ಸರಿಯಲ್ಲ . ಸೃಷ್ಟಿ ಸಿ ಕೊಂಡ ಪಂಚನಾಮೆ ಯಾಗಿದ್ದರಿಂದ ಸದ್ರಿ ಪನಚಾನಮೆಯಲ್ಲಿ ನಿಖರವಾದ ಸ್ಥಳವನ್ನು ಹಾಗೂ ಸಮಯವನ್ನು ನೀವು ಬರೆಯಲಿಲ್ಲ ಎಂದರೆ ಸರಿಯಲ್ಲ .

2. ನೀವು 2 ನೇ ಆರೋಪಿ ಮನೆಗೆ ಹೋಗಿದ್ದೆವು ಎಂದು ಹೇಳಿದಂತೆ ಅಲ್ಲಿಯ ಪೊಟೆ ತೆಗೆದಿರುತ್ತಿರಾ ಎಂದರೆ ಇಲ್ಲ . ನೀವು ಈಗಾಗಲೇ 2 ನೆ ಆರೋಪಿ ಮನೆಗೆ ಬಿಗ ಹಾಕಿದ್ದರು ಎಂದು ಹೇಳಿರುತ್ತಿರಿ ಅದರಂತೆ ಈ ವಿಷಯವನ್ನು ಪಂಚನಾಮೆಯಲ್ಲಿ ಕಾಣಿಸಿರುತ್ತಿರಾ ಎಂದರೆ ಇಲ್ಲ . ಸಾಮಾನ್ಯವಾಗಿ ಗುಂಡೆಟಿನಿಂದ ಪ್ರಾಣಿ ಸತ್ತರೆ ಸ್ಥಳದಲ್ಲಿ ರಕ್ತದ ಕಲೆಗಳು ಬಿಳುತ್ತದೆ ಎಂದರೆ ಸರಿ . ನೀವು ಸ್ಥಳಕ್ಕೆ ಹೋಗಿದ್ದೆವು ಎಂದು ಹೇಳಿದಂತೆ ಸ್ಥಳದಲ್ಲಿ ಆ ಪ್ರಾಣಿಯ ರಕ್ತದ ಕಲೆ ಯನ್ನು ಗಮನಿಸಿರುತ್ತಿರಾ ಎಂದರೆ ಇಲ್ಲ . ಏಕೆಂದರೆ ಆಗ ಮಳೆಗಾಲ ವಾಗಿತ್ತು ಮಳೆಯಿಂದ ಸಂಪೂರ್ಣಾಗಿ ರಕ್ತದ ಕಲೆ ನಾಶ ವಾಗಿತ್ತು . ಈ ವಿಷಯವನ್ನು ಪಂಚನಾವೆಯಲ್ಲಿ ನಮೂದಿಸಿಲ್ಲ. ಸಾಮಾನ್ಯವಾಗಿ ಯಾವುದೆ ಪ್ರಾಣಿಯ ಮಾಂಸ ಮಾಡಬೇಕಾದರೆ ಆ ಪ್ರಾಣಿಯ ಮಾಂಸದ ಸಣ್ಣ ಚೂರುಗಳು ಎಲುಬಿನ ಸಣ್ಣ ಚೂರುಗಳು ಅವುಗಳ ಕುರುಹುಗಳು ಸ್ಥಳದಲ್ಲಿ ಬಿದ್ದಿರುತ್ತದೆ ಎಂದರೆ ಇರಬಹುದು . ಆ ಸ್ಥಳದಲ್ಲಿ ನೀವು ಹೋಗಿದ್ದೇನೆ ಎಂದು ಹೇಳಿದಂತೆ ಅಲ್ಲಿ ಜಿಂಕೆಯ ಸಣ್ಣ ಮಾಂಸದ ಚೂರುಗಳು ಹಾಗೂ ಎಲುಬಿನ ಸಣ್ಣ ಚೂರುಗಳು ಅದರ ಕುರುಹುಳು ಸ್ಥಳದಲ್ಲಿ ಇತ್ತಾ ಎಂದರೆ ಮಳೆಗಾಲವಾಗಿದ್ದು ಅದು ಹಳ್ಳದ ಪ್ರದೇಶವಾಗಿದ್ದರಿಂದ ಆ ರೀತಿಯ ಕುರುಗಳು ಕಂಡು ಬಂದಿಲ್ಲ . ಈ ವಿಷಯವನ್ನು ಪಂಚನಾಮೆಯಲ್ಲಿ ನಮೂದು ಮಾಡಿಲ್ಲ . ನೀವು ಆ ದಿನ ಘಟನಾ ಸ್ಥಳಕ್ಕೆ ಹೊದದ್ದು ಇಲ್ಲ . ಪಂಚನಾಮೆ ಮಾಡಿದ್ದು ಇಲ್ಲ ಆ ಕಾರಣದಿಂದ ನೀವು ಈ ಎಲ್ಲಾ ವಿಷಯಗಳು ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ . ಸಾಕ್ಷಿಗೆ ನಿಪಿ–5 ರ ಕರುಳಿನ ಪೊಟೊ ತೋರಿಸಲಾಗಿದ್ದು ಅದನ್ನು ನೋಡಿದ ತಕ್ಷಣವೆ ಯಾವ ಪ್ರಾಣಿಯ ಕರುಳು ಎಂದು ಹೇಳಲಾಗುವುದಿಲ್ಲ ಎಂದರೆ ಸರಿ . ಅದೇ ರೀತಿ ಮಾಂಸ ಯಾವ ಪ್ರಾಣಿಯದ್ದು ಎಂದು ತಿಳಿಯಬೇಕಾದರೆ FSL ವರದಿ ಬಂದ ನಂತರೆ ಗೊತ್ತಾಗುತ್ತದೆ ಎಂದರೆ ಸರಿ . ನಿಪಿ–5 ನ್ನು ಈ ಪ್ರಕರಣಕ್ಕೆ ಅನೂಕೂಲವಾಗುವಂತೆ ಸೃಷ್ಟಿ ಮಾಡಿದ್ದು ಎಂದರೆ ಸರಿಯಲ್ಲ . ನಿಮ್ಮ ಸಿಬ್ಬಂದಿಯ ಬಳಿ ಆ ಸಮಯದಲ್ಲಿ ಎನರೊಯಡ ಮೊಬೈಲ ಇತ್ತಾ ಎಂದರೆ ಇರಬಹುದು . ನ್ಯಾಯಾಲಯದ ಮುಂದೆ ಹಾಜರ ಪಡಿಸಿದ ಪೊಟೊಗಳು ಈ ಪ್ರಕರಣಕ್ಕೆ ಅನೂಕೂಲವಾಗಲಿ ಎಂದು ಸೃಷ್ಟಿ ಮಾಡಿದ ಪೊಟೊ ಎಂದರೆ ಸರಿಯಲ್ಲ . 3 ನೇ ಆರೋಪಿಯ ಅಣ್ಣತಮ್ಮಂದಿರ ಮದ್ಯೆ ಕಲಹ ಇತ್ತು ಎಂದು ಪಂಚನಾಮೆ ಯಲ್ಲಿ ನಮಾದಾದಂತೆ ಅದರ ಬಗ ಪಿರ್ಯಾದಿಯನ್ನು ಅಥವಾ ಪೋಲಿಸ ದಾಖಲಾತಿ ನೀವು

ನೋಡಿರುತ್ತಿರಾ ಎಂದರೆ ನಾನು ದಾಖಲಾತಿ ನೋಡಿಲ್ಲ ಮತ್ತು ಹಾಜರ ಪಡಿಸಿದ್ದು ಇಲ್ಲ ಆದರೆ 1 ನೆ ಆರೋಪಿ ಮತ್ತು 2 ನೇ ಆರೋಪಿ ಇಬ್ಬರೂ ಸಹ 3 ನೆ ಆರೋಪಿಯೊಂದಿಗೆ ಕಲಹ ಇತ್ತು ಎಂದು ಅವರೆ ಹೇಳಿದ್ದರು . ಈ ಪ್ರಕರಣದಲ್ಲಿ 3 ನೇ ಆರೋಪಿಯನ್ನು ಸೇರಿಸಬೇಕು ಎಂಬ ಉದ್ದೇಶದಿಂದ 1 ಮತ್ತು 2 ನೆ ಅರೋಪಿತರು 3 ನೆ ಆರೋಪಿಯೊಂದಿಗೆ ಕಲಹ ಹೊಂದಿರುತ್ತಾರೆ ಎಂದು ನೀವು ಸುಳ್ಳಾಗಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ . 1 ಮತ್ತು 3 ನೆ ಆರೋಪಿತರು ನಿಮ್ಮ ಇಲಾಖೆ ವಿರುದ್ಧ ಅರಣ್ಯದ ಅತಿಕ್ರಮಣದ ಪ್ರಕರಣದಲ್ಲಿ ಮಂಚೂಣಿ ಹೋರಾಟಗಾರರು ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ 1 ಮತ್ತು 3 ನೆ ಅರೊಪಿತರು ನಿಮ್ಮ ಇಲಖೆಯ ವಿಷಯಗಳನ್ನು ಹೊರಗೆ ಹಾಕಲು ಮಂಚೂಣಿಯಲ್ಲಿ ಇದ್ದ ವ್ಯಕ್ತಿಗಳು ಎಂದರೆ ನನಗೆ ಮಾಹಿತಿ ಇಲ್ಲ . 3 ನೆ ಆರೋಪಿಯು ಲೈಸೆನ್ಸ ಹೊಂದ್ದಿದ ಗನ್ ವನ್ನು ಇಟ್ಟು ಕೊಂಡಿದ್ದರು ಸಹ ಅರಣ್ಯ ಅತಿಕ್ರಮಣ ಹೋರಾಟಗಾರರು ಹಾಗೂ ನಿಮ್ಮ ಇಲಾಖೆ ವಿರುದ್ಧ ಅನೇಕ ಸಲ ಹೋರಾಟ ಮಾಡಿರುವುದರಿಂದ ಅವರ ವಿರುದ್ದ ಸುಳ್ಳು ಪ್ರಕರಣ ಹಾಕಿರುತ್ತಿರಿ ಎಂದರೆ ಸರಿಯಲ್ಲ . ನೀವು ನಿಮ್ಮ ಮೇಲಾಧಿಕಾರಿಗಳಿಂದ ಪ್ರಶಂಸೆ ಯನ್ನು ಪಡೆಯಲು ಅಂಕಿಅಂಶಕೋಸ್ಕರ ಹಾಗೂ ಆರೋತಪಿರ ಮೇಲೆ ಇರುವ ದ್ವೇಷದಿಂದ ಈ ಪ್ರಕರಣ ಹಾಕಿದ್ದು ಎಂದರೆ ಸರಿಯಲ್ಲ . ಅದಕ್ಕೆ ಪೂರಕವಾಗಿ ನೀವು ನ್ಯಾಯಾಲಯದ ಮುಂದೆ ಇರುವ ಮುದ್ದೆಮಾಲನ್ನು ಸೃಷ್ಟಿ ಮಾಡಿರುತ್ತಿರಿ ಎಂದರೆ ಸರಿಯಲ್ಲ . ಕಾಡುಪ್ರಾಣಿಗಳು ಸಾಂಕ್ರಾಮಿಕ ರೋಗ ಗಳಿಂದ ಮರಣ ಪಡುವ ಸಾಧ್ಯತೆ ಇರುತ್ತದೆ ಎಂದರೆ ಸರಿ . ಆ ರೀತಿಯಾಗಿ ಮೃತಪಟ್ಟ ಜಿಂಕೆಯನ್ನು ಈ ಪ್ರಕರಣದಲ್ಲಿ ಹಾಜರ ಪಡಿಸಿ ಸುಳ್ಳು ಪ್ರಕರಣ ಸೃಷ್ಟಿ ಮಾಡಿರುತ್ತಿರಿ ಎಂದರೆ ಸರಿಯಲ್ಲ . ಆರೋಪಿತರಿಗೂ ಹಾಗೂ ನೀವು ಜಪ್ತು ಪಡಿಸಿಕೊಂಡ ಮುದ್ದೆಮಾಲಿಗೂ ಯಾವುದೆ ಸಂಬದ ಇಲ್ಲ ಎಂದರೆ ಸರಿಯಲ್ಲ . ನ್ಯಾಯಾಲಯದ ಮುಂದೆ ಇರುವ ಪರಿಕರಗಳನ್ನು ಸೃಷ್ಟಿ ಮಾಡಿಕೊಂಡು ಪೊಟೊಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡು ಈ ಪ್ರಕರಣ ಸೃಷ್ಟಿ ಮಾಡಿರುತ್ತಿರಿ ಎಂದರೆ ಸರಿಯಲ್ಲ . ಜಪ್ತು ಪಂಚನಾಮೆ ಹಾಗೂ ಪುರವಣಿ ಪಂಚನಾಮೆಯನ್ನು ಕಚೇರಿಯಲ್ಲಿ ಬರೆದು ಕೊಂಡು ಸೃಷ್ಟಿ ಮಾಡಿ ಹಾಜರ ಪಡಿಸಿರುತ್ತಿರಿ ಎಂದರೆ ಸರಿಯಲ್ಲ . ನೀವಾಗಲಿ ನಿಮ್ಮ ಸಿಬ್ಬಂದಿಯಾಗಲಿ ದಿಃ23-8-2022 ರಂದು ಕರ್ತವ್ಯ ದಲ್ಲಿ ಇದ್ದ ಬಗ್ಗೆ ದಿನಚರಿಯನ್ನು ತನಿಖಾಧಿಕಾರಿಗೆ ಕೊಟ್ಟದ್ದು ಇರುತ್ತದೆಯಾ ಎಂದರೆ ಇಲ್ಲ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ತನಿಹಾಧಿಕಾರಿ

ACF ಅಗಿರುತ್ತಾರೆ ,ಆ ದಿನ ನೀವು ಕರ್ತವ್ಯ ದಲ್ಲಿ ಇದ್ದದ್ದೆ ಇಲ್ಲ ಆ ಕಾರಣದಿಂದಲೇ ನೀವು ಆ ದಿನ ಕರ್ತವ್ಯ ಇದ್ದೀರಿ ಎಂದು ರುಜುವಾತು ಪಡಿಸಲು ಯಾವುದೆ ದಾಖಲಾತಿ ನಿಮ್ಮ ಬಳಿ ಇಲ್ಲ ಎಂದರೆ ಸರಿಯಲ್ಲ . ನಿಮಗೆ ಆ ದಿನ ಯಾವುದೆ ಬಾತ್ಮಿ ಬಂದದ್ದು ಇಲ್ಲ ಸಿಬ್ಬಂದಿಗಳೊಂದಿಗೆ ಸ್ಥಳಕ್ಕೆ ಹೊದದ್ದು ಇಲ್ಲ ಪಂಚರನ್ನು ಕರೆದದ್ದು ಇಲ್ಲ . ಘಟನಾ ಸ್ಥಳದಲ್ಲಿ ಹೊದದ್ದು ಇಲ್ಲ, ಮುದ್ದೆ ಮಾಲುಗಳನ್ನು ವಶಪಡಿಸಿದ್ದು ಇಲ್ಲ ಎಂದರೆ ಸರಿಯಲ್ಲ .ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ . 1 ರಿಂದ 3 ನೇ ಆರೋಪಿತರ ವಿರುದ್ದ ಹೇಗಾದರೂ ಮಾಡಿ ಪ್ರಕರಣ ಸೃಷ್ಟಿಸಬೇಕು ಎಂಬ ದೂರುದ್ದೇಶದಿಂದ ಠಾಣೆಯಲ್ಲಿ ನೀವು ಮತ್ತು ನಿಮ್ಮ ಸಿಬ್ಬಂದಿಗಳು ಮತ್ತು ಇಲಾಖೆಯವರು ಈ ಪ್ರಕರಣ ಸೃಷ್ಟಿ ಮಾಡಿದ್ದು ಎಂದರೆ ಸರಿಯಲ್ಲ

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.